# ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: ಸುವರ್ಣ ಗ್ರಾಮೋದಯ ಯೋಜನೆಯ 5ನೇ ಹಂತದಡಿ ಚಿತ್ರದುರ್ಗ ಜಿಲ್ಲೆಯ ಗ್ರಾಮಗಳ ಪಟ್ಟಿಗೆ ಅನುಮೋದನೆ ಕುರಿತು.

ಓದಲಾಗಿದೆ: 1.ಸರ್ಕಾರಿ ಆದೇಶ ಸಂಖ್ಯೆ:ಗ್ರಾಅಪ:29:ಸುಗ್ರಾಯೋ:2012 ದಿ:29.06.2012
~~2.ಸರ್ಕಾರದ ಸುತ್ತೋಲೆ ಸಂಖ್ಯೆ:ಗ್ರಾಅಪ:29:ಸುಗ್ರಾಯೋ:2012 ದಿ:04.07.2012~~
3.ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತ್, ಚಿತ್ರದುರ್ಗ ಇವರ ಪತ್ರ ಸಂಖ್ಯೆ:ಚಿಜಿಪಂ:ಅ(2):ಸುಗ್ರಾ:ಸಿಆರ್-187:2012-13, ದಿ:11.09.2012.

**ಪ್ರಸ್ತಾವನೆ:**

2012-13ನೇ ಸಾಲಿನ ಐದನೇ ಹಂತದ ಸುವರ್ಣ ಗ್ರಾಮೋದಯ ಯೋಜನೆಯಡಿಯಲ್ಲಿ 1000 ಗ್ರಾಮಗಳನ್ನು ಆಯ್ಕೆ ಮಾಡಿ ಅಭಿವೃದ್ಧಿಪಡಿಸಲು ಉದ್ದೇಶಿಸಲಾಗಿದೆ. 5ನೇ ಹಂತದ ಯೋಜನೆಯ ಅನುಷ್ಠಾನ ಮಾಡುವ ಬಗ್ಗೆ, ಗ್ರಾಮಗಳ ಆಯ್ಕೆ, ಅನುದಾನ ಹಂಚಿಕೆ ಇತ್ಯಾದಿ ವಿಷಯಗಳ ಬಗ್ಗೆ ತೆಗೆದುಕೊಳ್ಳಬೇಕಾದ ಕ್ರಮಗಳ ಕುರಿತು ವಿವರವಾಗಿ ಮೇಲೆ ಓದಲಾದ (1) ಮತ್ತು (2)ರ ಸರ್ಕಾರದ ಆದೇಶ ಹಾಗೂ ಸುತ್ತೋಲೆಯನ್ನು ಹೊರಡಿಸಲಾಗಿದೆ. ಅದರನ್ವಯ ಚಿತ್ರದುರ್ಗ ಜಿಲ್ಲೆಯ **6 ತಾಲ್ಲೂಕುಗಳ 70 ಗ್ರಾಮಗಳನ್ನು** ಆಯ್ಕೆ ಮಾಡಿ ಶಾಸಕರಿಂದ ಶಿಫಾರಸು ಮಾಡಿದ ಮತ್ತು ಜಿಲ್ಲಾ ಉಸ್ತುವಾರಿ ಸಚಿವರಿಂದ ಅನುಮೋದನೆ ಪಡೆದು ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಜಿಲ್ಲಾ ಪಂಚಾಯತ್, ಚಿತ್ರದುರ್ಗ ಅವರು ಓದಲಾಗಿದೆ (3) ರಲ್ಲಿ ಸರ್ಕಾರದ ಅನುಮೋದನೆ ಕೋರಿ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಿರುತ್ತಾರೆ.

ಸದರಿ ಪ್ರಸ್ತಾವನೆಯನ್ನು ನಿಯಮಗಳನ್ವಯ ಪರಿಶೀಲಿಸಿದ್ದು, ಆಯ್ಕೆ ಪಟ್ಟಿಯನ್ನು ಅಧಿಕೃತವಾಗಿ ಹೊರಡಿಸಲು ಸರ್ಕಾರಿ ಆದೇಶದ ಅಗತ್ಯವಿದೆ. ಅನುಬಂಧದಲ್ಲಿರುವ ಚಿತ್ರದುರ್ಗ ಜಿಲ್ಲೆಯ 70 ಗ್ರಾಮಗಳಲ್ಲಿ ಸುವರ್ಣ ಗ್ರಾಮೋದಯ ಯೋಜನೆಯ 5ನೇ ಹಂತವನ್ನು ಅನುಷ್ಠಾನಗೊಳಿಸಲು ಸರ್ಕಾರ ತೀರ್ಮಾನಿಸಿದೆ. ಪ್ರಯುಕ್ತ ಈ ಆದೇಶ.

**ಸರ್ಕಾರದ ಆದೇಶ ಸಂಖ್ಯೆ:ಗ್ರಾಅಪ:78:ಸುಗ್ರಾಯೋ:2012. ಬೆಂಗಳೂರು, ದಿನಾಂಕ:22.09.2012**

ಪ್ರಸ್ತಾವನೆಯಲ್ಲಿ ವಿವರಿಸಿದಂತೆ, ಐದನೇ ಹಂತದ ಸುವರ್ಣ ಗ್ರಾಮೋದಯ ಯೋಜನೆಯಡಿ ಚಿತ್ರದುರ್ಗ ಜಿಲ್ಲೆಯ **6 ತಾಲ್ಲೂಕುಗಳ 70 ಗ್ರಾಮಗಳಿಗೆ** ಅನುಬಂಧದಲ್ಲಿ ನಮೂದಿಸಿರುವಂತೆ ಸದರಿ ಗ್ರಾಮಗಳನ್ನು ಅನುಷ್ಠಾನಗೊಳಿಸಲು ಅನುಮೋದನೆ ನೀಡಲಾಗಿದೆ. ಸುವರ್ಣ ಗ್ರಾಮೋದಯ ಯೋಜನೆಯ 5ನೇ ಹಂತವನ್ನು ಅನುಷ್ಠಾನಗೊಳಿಸುವಾಗ ಈ ಕೆಳಕಂಡ ನಿಯಮಗಳನ್ನು ಪಾಲಿಸಲು ಆದೇಶಿಸಿದೆ.

--2---

1. ಓದಲಾಗಿದೆ (1)ರ ಸರ್ಕಾರಿ ಆದೇಶದಲ್ಲಿ ಹಾಗೂ ಓದಲಾಗಿದೆ (2)ರ ಸುತ್ತೋಲೆಯಲ್ಲಿ ಹೊರಡಿಸಲಾದ ಯೋಜನಾ ಮಾರ್ಗಸೂಚಿ ಪ್ರತಿ ಗ್ರಾಮಕ್ಕೆ ಸಂಬಂಧಿಸಿದಂತೆ ಸಮಗ್ರ ಅಭಿವೃದ್ಧಿ ಯೋಜನೆಯನ್ನು ರೂಪಿಸಿ ಅನುಮೋದನೆ ನೀಡಿ ಕಾರ್ಯಗತಗೊಳಿಸುವುದು.
2. ಸರ್ಕಾರಿ ಸುತ್ತೋಲೆಯೊಂದಿಗೆ ಲಗತ್ತಿಸಲಾದ ಅನುಬಂಧ-1ರಲ್ಲಿ ಸೂಚಿಸಿದ ತಾಲ್ಲೂಕುವಾರು ನಿಗದಿಪಡಿಸಿರುವ ಅನುದಾನದ ಮಿತಿಯೊಳಗೆ ಕಾರ್ಯಕ್ರಮವನ್ನು ಕೈಗೊಳ್ಳುವುದು.
3. ಗ್ರಾಮವಾರು ಅನುದಾನವನ್ನು ನಿಗದಿಪಡಿಸುವಾಗ ಗ್ರಾಮದ ಜನಸಂಖ್ಯೆಗನುಗುಣವಾಗಿ ತಲಾನುದಾನ ನಿಯಮಕ್ಕೆ ತಕ್ಕಂತೆ ನಿಗದಿಪಡಿಸಿಕೊಳ್ಳತಕ್ಕದ್ದು.
4. ಸುತ್ತೋಲೆಯೊಂದಿಗೆ ಲಗತ್ತಿಸಲಾದ ಅನುಬಂಧ-2ರ ವೇಳಾಪಟ್ಟಿಗನುಗುಣವಾಗಿ ಕಾರ್ಯಾನುಷ್ಠಾನ ಮಾಡುವುದು.
5. ಆಯ್ಕೆಯಾದ ಗ್ರಾಮವು ಈ ಯೋಜನೆಯ ಹಿಂದಿನ ಹಂತದಲ್ಲಿ ಆಯ್ಕೆಯಾಗಿಲ್ಲದಿರುವ ಬಗ್ಗೆ ಖಾತರಿಪಡಿಸಿಕೊಳ್ಳುವುದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

(ಬೂವನಹಳ್ಳಿ ನಾಗರಾಜ್)
ನಿರ್ದೇಶಕರು(ಸು.ಗ್ರಾ) ಹಾಗೂ
ಪದನಿಮಿತ ಸರ್ಕಾರದ ಉಪಕಾರ್ಯದರ್ಶಿ,
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ

ಪ್ರತಿಯನ್ನು:

1. ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಜಿಲ್ಲಾ ಪಂಚಾಯತ್, ಚಿತ್ರದುರ್ಗ.
2. ಮಾನ್ಯ ಜಿಲ್ಲಾ ಉಸ್ತುವಾರಿ ಸಚಿವರು, ಚಿತ್ರದುರ್ಗ.
3. ಮಾನ್ಯ ಮುಖ್ಯ ಮಂತ್ರಿಯವರ ಆಪ್ತ ಕಾರ್ಯದರ್ಶಿಗಳು, ವಿಧಾನಸೌಧ, ಬೆಂಗಳೂರು.
4. ಮಾನ್ಯ ಉಪ ಮುಖ್ಯ ಮಂತ್ರಿ ಮತ್ತು ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಸಚಿವರ ಆಪ್ತ ಕಾರ್ಯದರ್ಶಿಗಳು, ವಿಧಾನಸೌಧ, ಬೆಂಗಳೂರು.
5. ಮುಖ್ಯ ಲೆಕ್ಕಾಧಿಕಾರಿ ಮತ್ತು ಮುಖ್ಯ ಯೋಜನಾಧಿಕಾರಿ, ಜಿಲ್ಲಾ ಪಂಚಾಯತ್, ಚಿತ್ರದುರ್ಗ
6. ಸಂಕಲನಕಾರರು, ರಾಜ್ಯಪತ್ರ, ಬೆಂಗಳೂರು.
7. ಮಹಾಲೇಖಪಾಲರು, ಕರ್ನಾಟಕ, ಬೆಂಗಳೂರು.
8. ವಿಶೇಷಾಧಿಕಾರಿ, ಗಣಕ ಕೋಶ, ಗ್ರಾ.ಅ.ಪ.ಇಲಾಖೆ ಇವರಿಗೆ ವೆಬ್‌ಸೈಟ್‌ನಲ್ಲಿ ಪ್ರಕಟಿಸಲು
9. ಸಂಪಾದಕರು, ಕರ್ನಾಟಕ ವಿಕಾಸ, ಮುಂದಿನ ಸಂಚಿಕೆಯಲ್ಲಿ ಪ್ರಕಟಿಸಲು
10. ಹೆಚ್ಚುವರಿ.

ಅನುಬಂಧ

ಚಿತ್ರದುರ್ಗ ಜಿಲ್ಲೆಯ 5ನೇ ಹಂತದ ಸುವರ್ಣ ಗ್ರಾಮೋದಯ ಯೋಜನೆ – ಅನುಮೋದಿತ ಗ್ರಾಮಗಳ ಪಟ್ಟಿ

ಸರ್ಕಾರದ ಆದೇಶ ಸಂಖ್ಯೆ:ಗ್ರಾಅಪ:78:ಸುಗ್ರಾಯೋ:2012, ದಿನಾಂಕ:22.09.2012

ಜಿಲ್ಲೆ: ಚಿತ್ರದುರ್ಗ

| ಕ್ರಸಂ. | ತಾಲ್ಲೂಕು | ಕ್ರ.ಸ. | ಗ್ರಾಮಗಳ ಹೆಸರು | 2001ರ ಜನಗಣತಿ ಪ್ರಕಾರ ಜನಸಂಖ್ಯೆ | ತಾಲ್ಲೂಕುವಾರು ನಿಗದಿಪಡಿಸಿದ ಅನುದಾನ (ರೂ.ಲಕ್ಷಗಳಲ್ಲಿ) |
|---|---|---|---|---|---|
| 1 | ಚಿತ್ರದುರ್ಗ | 1 | ಜೆ.ಎನ್.ಕೋಟೆ | 3740 | 91.35 |
| | | 2 | ಐಯ್ಯನಹಳ್ಳಿ ಮಜರೆ ಕುರುಬರ ಹಟ್ಟಿ | 2043 | 49.90 |
| | | 3 | ಹೊಸಹಳ್ಳಿ ಮಜುರೆ ಕೆ.ಟಿ.ಹಳ್ಳಿ | 1416 | 34.59 |
| | | 4 | ಮಾಳಪಪ್ಪನಹಟ್ಟಿ | 1500 | 36.64 |
| | | 5 | ಉಪ್ಪನಾಯ್ಕನಹಳ್ಳಿ | 955 | 23.33 |
| | | 6 | ಸಿಂಗಾಪೂರ | 2064 | 50.41 |
| | | 7 | ಜಾಲಿಕಟ್ಟೆ | 1187 | 28.99 |
| | | 8 | ದಂಡಿನಕುರುಬರಹಟ್ಟಿ | 2200 | 53.74 |
| | | 9 | ಮುದ್ದಾಂಪುರ | 3042 | 74.30 |
| | | 10 | ಕೂನಬೇವು | 2894 | 70.69 |
| | | 11 | ಯಳಗೋಡು | 1988 | 48.56 |
| | | 12 | ಪಳಕಿಹಳ್ಳಿ | 1380 | 33.71 |
| | | 13 | ಅಳಗವಾಡಿ | 1939 | 47.36 |
| | | 14 | ಕೊಳಹಾಳ್ | 3129 | 76.43 |
| | | | ಒಟ್ಟು | **29477** | **720.00** |
| 2 | ಚಳ್ಳಕೆರೆ | 1 | ಕಡೆಗುಡೆ | 1283 | 30.80 |
| | | 2 | ದೊಡ್ಡೇರಿ | 4254 | 102.12 |
| | | 3 | ಪಗಡಲಬಂಡೆ | 3176 | 76.24 |
| | | 4 | ದೇವರಮರಿಕುಂಟೆ | 1962 | 47.10 |
| | | 5 | ಮೀರಸಾಬಿಹಳ್ಳಿ | 2324 | 55.79 |
| | | 6 | ಚೌಳೂರು | 2453 | 58.89 |
| | | 7 | ಪಿ.ಮಹದೇವಪುರ | 2511 | 60.28 |
| | | 8 | ಹಳೇಜೋಗಿಹಟ್ಟಿ | 2174 | 52.19 |
| | | 9 | ಚಿತ್ರನಾಯ್ಕನಹಳ್ಳಿ | 2052 | 49.26 |
| | | 10 | ಘಟಪರ್ತಿ | 4508 | 108.22 |
| | | 11 | ಗಜ್ಜಿಗಾನಹಳ್ಳಿ | 1777 | 42.66 |
| | | 12 | ಬೇಡರೆಡ್ಡಿಹಳ್ಳಿ | 1696 | 40.71 |
| | | 13 | ಓಬಳಾಪುರ | 3696 | 88.73 |
| | | | ಒಟ್ಟು | **33866** | **813.00** |
| 3 | ಹಿರಿಯೂರು | 1 | ಹೂವಿನಹೊಳೆ | 2779 | 67.65 |
| | | 2 | ಖಂಡೇನಹಳ್ಳಿ | 3480 | 84.72 |
| | | 3 | ಕಂದಿಕೆರೆ | 1792 | 43.62 |
| | | 4 | ಐಮಂಗಲ | 1647 | 40.09 |
| | | 5 | ಮಲ್ಲಪ್ಪನಹಳ್ಳಿ | 1123 | 27.34 |
| | | 6 | ಬಗ್ಗನಡು | 990 | 24.10 |
| | | 7 | ಅಲ್ಲಗಲ್ಲದಿ | 2417 | 58.84 |
| | | 8 | ಚಿಕ್ಕಸಿದ್ದವ್ವನಹಳ್ಳಿ | 2046 | 49.81 |
| | | 9 | ಗೌನಹಳ್ಳಿ | 1255 | 30.55 |
| | | 10 | ಎಂ.ಡಿ.ಕೋಟೆ | 2017 | 49.10 |
| | | 11 | ಯಲ್ಲದಕೆರೆ | 3951 | 96.18 |
| | | 12 | ಮೇಟಿಕುರ್ಕೆ | 1930 | 46.98 |
| | | | ಒಟ್ಟು | **25427** | **619.00** |

| | | | | | |
|---|---|---|---|---|---|
| | | 1 | ಶಿವಗಂಗೆ | 1775 | 42.43 |
| | | 2 | ಶಿವಪುರ | 1777 | 42.48 |
| | | 3 | ಆಡನೂರು | 2433 | 58.16 |
| | | 4 | ದುಮ್ಮಿ | 3630 | 86.78 |
| | | 5 | ಹಿರೇಕಂದವಾಡಿ | 2284 | 54.60 |
| 4 | ಹೊಳಲ್ಕೆರೆ | 6 | ಗಂಜಿಗನೂರು | 1636 | 39.11 |
| | | 7 | ಮದ್ದೇರು | 1403 | 33.54 |
| | | 8 | ಟಿ.ನುಲೇನೂರು | 1446 | 34.57 |
| | | 9 | ತೊಡರನಾಳ್ | 1366 | 32.66 |
| | | 10 | ಕಾಳಘಟ್ಟ | 2071 | 49.51 |
| | | 11 | ಆರ್.ನುಲೇನೂರು | 2140 | 51.16 |
| | | | **ಒಟ್ಟು** | **21961** | **525.00** |
| | | 1 | ಜಂತಿಕೊಳಲು | 718 | 19.40 |
| | | 2 | ಅನಿವಾಳ | 1401 | 37.86 |
| | | 3 | ಹೆಬ್ಬಳ್ಳಿ | 1227 | 33.16 |
| | | 4 | ಕೊಂಡಾಪುರ | 1080 | 29.19 |
| | | 5 | ಅತ್ತಿಘಟ್ಟ | 1107 | 29.92 |
| | | 6 | ಮಧುರೆ | 1689 | 45.65 |
| | | 7 | ಬಲ್ಲಾಳಸಮುದ್ರ | 1910 | 51.62 |
| | | 8 | ದೊಡ್ಡಘಟ್ಟ | 1637 | 44.24 |
| 5 | ಹೊಸದುರ್ಗ | 9 | ಅತ್ತಿಮಗೆಬೋವಿಹಳ್ಳಿ | 2147 | 58.02 |
| | | 10 | ರಂಗವ್ವನಹಳ್ಳಿ | 1002 | 27.08 |
| | | 11 | ಕಾರೇಹಳ್ಳಿ | 898 | 24.27 |
| | | 12 | ಶೆಟ್ಟಿಹಳ್ಳಿ | 1113 | 30.08 |
| | | 13 | ಡಿ.ಬಿ.ಕೆರೆ | 1317 | 35.59 |
| | | 14 | ತಾಂಡಗಿ | 2434 | 65.78 |
| | | 15 | ಶಿವನಕಟ್ಟೆ | 1226 | 33.13 |
| | | | **ಒಟ್ಟು** | **20906** | **565.00** |
| | | 1 | ಕೊಂಡ್ಲಹಳ್ಳಿ | 7330 | 170.66 |
| | | 2 | ಬೊಮ್ಮದೇವರಹಳ್ಳಿ | 1881 | 43.79 |
| | | 3 | ಚಿಕ್ಕೇರಹಳ್ಳಿ–ಬಟ್ರಹಳ್ಳಿ | 1947 | 45.33 |
| 6 | ಮೊಳಕಾಲ್ಮೂರು | 4 | ತಿಮ್ಮಲಾಪುರ | 1835 | 42.72 |
| | | 5 | ತಮ್ಮೇನಹಳ್ಳಿ | 880 | 20.49 |
| | | | **ಒಟ್ಟು** | **13873** | **323.00** |
| | | | **ಜಿಲ್ಲೆಯ ಒಟ್ಟು ಮೊತ್ತ** | **145510** | **3565.00** |

(ಬೂವನಹಳ್ಳಿ ನಾಗರಾಜ್)
ನಿರ್ದೇಶಕರು (ಸುಗ್ರಾ) ಹಾಗೂ
ಪದನಿಮಿತ್ತ ಸರ್ಕಾರದ ಉಪ ಕಾರ್ಯದರ್ಶಿ,
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ